**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1637/2020**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 2**

**ದಿನಾಂಕಃ** 10.08.2026 **ಸಿಡಬ್ಲ್ಯೂ 4**

| | |
|---|---|
| ಹೆಸರು | ಶ್ರೀಮತಿ ಈರಮ್ಮ |
| ಗಂಡನ ಹೆಸರು | ಪ್ರಭುಗೌಡ |
| ವಯಸ್ಸು | 38 ವರ್ಷ |
| ಉದ್ಯೋಗ | ಮನೆಗೆಲಸ |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ21.08.2020 ರಂದು ಮಧ್ಯಾಹ್ನ 2 ಗಂಟೆ ಬಸ್ ಗೆ ನಾನು, ನನ್ನ ಗಂಡ ಮತ್ತು ನನ್ನ ಮಕ್ಕಳು ಹರಪ್ಪನಹಳ್ಳಿ ತಾ. ನಿಟ್ಟೂರು ಗ್ರಾಮಕ್ಕೆ ಹೋಗಿದ್ದೆವು. ಅದೇ ದಿನ ರಾತ್ರಿ ನಮ್ಮ ಮನೆ ಕಳ್ಳತನವಾಗಿರುತ್ತದೆ. ನಮ್ಮ ಮನೆಯಲ್ಲಿ ಬಿಜೆಪಿ ಎಂದು ನಮೂದು ಇರುವ ಉಂಗುರ, ಒಂದು ಜೊತೆ ಕಿವಿ ಓಲೆ, ಮಕ್ಕಳ 2 ಉಂಗುರ, ಕಳ್ಳತನವಾಗಿರುತ್ತದೆ. ನನ್ನ ಗಂಡನ ಗೆಳೆಯ ರಾಜೇಶರವರು ನಮ್ಮ ಮನೆಯಲ್ಲಿ ಕಳ್ಳತನವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ನನ್ನ ಗಂಡ ಹರಿಹರಕ್ಕೆ ಬಂದು ಪೋಲೀಸರಿಗೆ ದೂರು ನೀಡಿರುತ್ತಾರೆ. ನಂತರ ಪೋಲೀಸರು ಒಂದು ದಿನ ನಮ್ಮನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ನಮ್ಮ ಆಭರಣಗಳನ್ನು ತೋರಿಸಿರುತ್ತಾರೆ ನಾನು ನೋಡಿ ಗುರುತಿಸಿರುತ್ತೇನೆ. ಸಾಕ್ಷಿಯು ನಿಪಿ.7 ರಲ್ಲಿರುವ ತಮ್ಮ ಬಂಗಾರದ ಆಭರಣಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರನ್ನು ನೋಡಿರುವುದಿಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಜಿ ಕೆ ಡಿ ವಕೀಲರಿಂದಃ

ನಾನು ಪೋಲೀಸರಿಗೆ ಆಭರಣಗಳ ಬಿಲ್ಲುಗಳನ್ನು ಕೊಟ್ಟಿರುವುದಿಲ್ಲ. ನಮ್ಮ ಮನೆಯಲ್ಲಿ ಯಾವುದೇ ಆಭರಣಗಳು ಕಳ್ಳತನವಾಗಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ಮಹಜರ್ ಮಾಡಿದಾಗ ನಾನು ಮನೆಯಲ್ಲಿರಲಿಲ್ಲ. ಠಾಣೆಯಲ್ಲಿ ನಾನು ಯಾವುದೇ ವಸ್ತುಗಳನ್ನು ಗುರುತಿಸಿರುವುದಿಲ್ಲ, ನಾನು ಯಾವುದೇ ಸಹಿಗಳನ್ನು ಮಾಡಿರುವುದಿಲ್ಲ. ನಮ್ಮ ಮನೆಯಲ್ಲಿ ಯಾವುದೇ ಆಭರಣಗಳು ಕಳ್ಳತನವಾಗದೇ ಇದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.